# ಕೀಯ ಕೀಯ... ರಾಜಕೀಯ!

'ಕಾಶೀನಾಥ್ ಮೊದಲು ಮನ್ಮಥನ ಪಾತ್ರ ಕೊಟ್ಟರು. ತೆರೆಮೇಲೆ ನನ್ನ ಉಬ್ಬುಹಲ್ಲು ನೋಡಿ ನಾನೇ ಬೆಚ್ಚಿದೆ. ನಟನಾಗುವ ಆಸೆ ಬಿಟ್ಟೆ. ನಿರ್ದೇಶಕನ ಟೋಪಿ ತೊಟ್ಟೆ. ಅಲ್ಲಿ ಇನ್ನೊಂದು ಸಂಘರ್ಷ. ಸ್ನೇಹಿತನೊಬ್ಬ ಹಲ್ಲಿಗೆ ಕ್ಲಿಪ್ ಹಾಕಿಸಿಕೊಳ್ಳುವ ಸಲಹೆ ಕೊಟ್ಟ. ಹಲ್ಲು ತುಸು ಒಳಗೆ ಹೋಯಿತು. ನಾನೂ ಹೀರೋ ಆದೆ. ಆಗ ಮತ್ತೊಂದು ಸಂಘರ್ಷ...'

ಬೀದಿ ನಾಟಕಗಳಿಂದ ರಾಜಕೀಯ ನಾಟಕದ ಪಡಸಾಲೆಗೆ ಬಂದು ನಿಂತಿರುವ ನಟನೊಬ್ಬ ಹೀಗೆ ಪುಂಖಾನುಪುಂಖವಾಗಿ ಸಂದರ್ಶನಗಳನ್ನು ಈಚೀಚೆಗೆ ಕೊಡಲಾರಂಭಿಸಿದ್ದಾರೆ. ಕೆಲವು ವರ್ಷಗಳ ಹಿಂದೆ ಅವರು ಸುದೀರ್ಘ ಸಂದರ್ಶನಗಳಿಗೆ ಒಪ್ಪುತ್ತಲೇ ಇರಲಿಲ್ಲ. ಯಾರಾದರೂ ಸುದ್ದಿಮಿತ್ರರು ಕೈಲಿ ಪ್ರಶ್ನಾವಳಿಗಳ ಉದ್ದದ ಚೀಟಿ ಹಿಡಿದುಕೊಂಡಿದ್ದರಂತೂ ಸಹಿಸುತ್ತಿರಲಿಲ್ಲ. 'ನೀವು ನನ್ನನ್ನು ಟ್ರ್ಯಾಪ್ ಮಾಡಲೇ ಬಂದಿದ್ದೀರಿ' ಎಂದು ನೇರೇನೇರ ಜರೆದು ಕಳುಹಿಸಿಬಿಡುತ್ತಿದ್ದರು.

ಅವರ ಮಾತಿನಲ್ಲಿ ಸತ್ಯವಿದೆ. ಸಂಘರ್ಷ ಕೂಡ ಇದ್ದಿದ್ದೇ. ಇದುವರೆಗೆ ಅವರು ಬಣ್ಣದ ಲೋಕದಲ್ಲಿ ಏನೆಲ್ಲ 'ಪ್ರಯೋಗ'ಗಳನ್ನು ಮಾಡಿರುವರೋ ಅವೆಲ್ಲದರ ಹಿಂದೆ ಇದ್ದ ಮಹತ್ವದ ಉದ್ದೇಶ ರಾಜಕೀಯ ಪ್ರವೇಶ. ಹಾಗೆಂದು ಅವರೇ ಹೇಳಿಕೊಂಡಿದ್ದಾರೆ.

ಮೊದಲಿನಿಂದಲೂ ಅವರದ್ದು 'ಫ್ಲ್ಯಾಷ್ ಮಾಬ್' ತಂತ್ರ. ಕೂಗುಮಾರಿ ಆಗುವುದು, ಬಣ್ಣ ಬಣ್ಣದ ವೇಷಭೂಷಣಗಳಿಂದ ಪಾತ್ರಗಳಿಗೆ 'ಕ್ರ್ಯಾಂಕಿ' ಗುಣ ಕಲ್ಪಿಸುವುದು, ತಮ್ಮ ಮುಖದ ಚಿತ್ರದ ಟೀಶರ್ಟ್ ಅನ್ನು ತಾವೇ ಧರಿಸಿ ಆತ್ಮವಿಮರ್ಶೆಯ ಹೊಸ ಹಾದಿ ಎಂದು ಹೂಂಕರಿಸುವುದು... ಇಂಥ ಪ್ರಯೋಗಗಳು ಅವರಿಗೆ ಮಿಶ್ರಫಲ ಕೊಟ್ಟಿವೆ. ನೃತ್ಯ ಮಾಡಲು ಬಾರದ, ಸಾಹಸ ದೃಶ್ಯಗಳಿಗೆ ಅಗತ್ಯವಿರುವಷ್ಟು ಭಾಗದ ದೇಹದ ಅವರಿಗೆ ಹರಿತವಾದ ನಾಲಗೆ ಇದೆ. ಒಂದು ಕಡೆ ನಿಲ್ಲದ ಕಣ್ಣಿನ ಗುಡ್ಡೆಗಳಿವೆ. ತೋಟವೆಂದರೆ ಅವರಿಗೆ ಇಷ್ಟ. ವರ್ತುಲರಸ್ತೆಗೆ ಹೊಂದಿಕೊಂಡ ಗಿಜಿಗಿಜಿ ಟ್ರಾಫಿಕ್ ನಡುವೆ ಒಂದು ಮನೆ. ತೋಟದ ನಡುವೆ ಇನ್ನೊಂದು ಮನೆ. ರೆಸಾರ್ಟ್ ವಹಿವಾಟೂ ಇದೆ.

ವಜ್ರಾದಪಿ ಗಟ್ಟಿಯಾಗಿದ್ದ ಕನ್ನಡದ ದೊಡ್ಡ ನಿರ್ಮಾಪಕಿ ಒಬ್ಬರು, 'ನನ್ನ ಎರಡನೇ ಮಗನ ಕೆರಿಯರ್ರನ್ನು ಆ ನಿರ್ದೇಶಕ ಮುಗಿಸಿಬಿಟ್ಟ. ನಟನಾಗುವ ತೆವಲು ಇರುವವನು ನಿರ್ದೇಶಕ ಆಗಲೇಕೂಡದು' ಎಂದು ಟೀಕಿಸಿದ್ದರು. ಆಗ ಆ ನಿರ್ಮಾಪಕಿಯ ಮೂರನೇ ಮಗನಿಗೆ ಫೋನ್ ಮಾಡಿ, 'ಇದೇನು ಗುರು' ಎಂದು ಪ್ರಶ್ನಿಸುವಷ್ಟು ನೇರವಂತಿಕೆಯನ್ನು ಈ ನಟ–ನಿರ್ದೇಶಕ ಪ್ರದರ್ಶಿಸಿದ್ದರು.

ಚುನಾವಣೆಗೆ ನಿಲ್ಲಲು ಫಂಡ್ ಬೇಕಿಲ್ಲ ಎನ್ನುವುದು ಅವರ ಹೊಸ ತತ್ತ್ವ. ಆದರ್ಶಗಳ ದೊಡ್ಡ ಪಟ್ಟಿ ಇಟ್ಟುಕೊಂಡು, ಭ್ರಷ್ಟ ಸಮಾಜದ ಎದುರು ಈಜಲು ಹೊರಟಿದ್ದಾರೆ. ನಟನಾಗಿ, ನಿರ್ದೇಶಕನಾಗಿ ಈಸಿ ಜಯಿಸಿದ ಅವರ ಹೊಸ ಇನಿಂಗ್ಸ್ ಹೇಗಿರುತ್ತದೆ ಎನ್ನುವ ಕುತೂಹಲ ಒಂದಿಷ್ಟು ಅಭಿಮಾನಿಗಳಿಗಂತೂ ಇದೆ.

● ವಿಶಾಖ ಎನ್.

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68